ಇನ್ನೊಂದು ಸಮಿತಿಯನ್ನು ಮಾಡಿ ನನ್ನ ಕ್ಷೇತ್ರದ ಜನತೆಯ ಅಭಿಪ್ರಾಯವನ್ನು ಪಡೆದ ನಂತರವೇ ಈ ವಿಚಾರದಲ್ಲಿ ಸರ್ಕಾರ ನಿರ್ಧಾರ ಮಾಡಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ, ಅಂತೆಯೇ ಈ ವಿಚಾರದಲ್ಲಿ ಸರ್ಕಾರದ ಸ್ಪಷ್ಟವಾದ ನಿಲುವನ್ನು ತಿಳಿಸಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕನ್ನು ಎರಡು ಪ್ರಾಂತಗಳಲ್ಲಿ ತಂಡರಿಸಿ ಬೇರೆ ತಾಲ್ಲೂಕಿಗೆ ಸೇರ್ಪಡೆ ಮಾಡಿ ಕೊಟ್ಟಿರುವ ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ಶಿಫಾರಸ್ಸು ಏಕಪಕ್ಷೀಯವಾಗಿದ್ದು, ಈ ಬಗ್ಗೆ ಸಮಿತಿಯು ಬೆಳ್ತಂಗಡಿ ತಾಲ್ಲೂಕಿನ ಜನತೆಯಾನ್ನಾಗಲೀ ಮಾನ್ಯ ಸದಸ್ಯರ ಅಭಿಪ್ರಾಯವನ್ನಾಗಲೀ ಪಡೆಯದೇ ಶಿಫಾರಸ್ಸು ಮಾಡಿರುವುದಾಗಿ ಸೂಚಿಸಿರುತ್ತಾರೆ ಹಾಗೂ ಇನ್ನೊಂದು ಸಮಿತಿಯ ರಚನೆಯನ್ನು ಮಾಡಿ ತಮ್ಮ ಕ್ಷೇತ್ರದ ಜನತೆಯ ಅಭಿಪ್ರಾಯವನ್ನು ನಂತರವೇ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕೆಂದು ಸಹ ಸೂಚನೆ ನೀಡಿರುತ್ತಾರೆ.

ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಯವರಿಗೆ ಶ್ರೀ ಹಾಡೇಕರ್‌ರವರ ವರದಿಯ ಶಿಫಾರಸ್ಸು ಬಗ್ಗೆ ಈ ಕೆಳಕಂಡ ಎರಡು ಅಂಶಗಳ ಬಗ್ಗೆ ಪತ್ರ ಬರೆದರೆ.

ಅ) ಬೆಳ್ತಂಗಡಿ ತಾಲ್ಲೂಕಿನ ವೇಣೂರು ಫಿರ್ಕಾವನ್ನು ಹೊಸದಾಗಿ ರೂಪಿಸಲಾಗುವ ಮೂಡಬಿದ್ರಿ ತಾಲ್ಲೂಕಿಗೆ ಸೇರ್ಪಡೆ ಮಾಡಬಾರದೆಂದೂ,

ಆ) ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಾಗ ಮಾಡಿ ಉಡುಪಿ ಜಿಲ್ಲೆಯ ರಚನೆ ಮಾಡಬಾರದೆಂದೂ, ಹಾಗೂ ಬೆಳ್ತಂಗಡಿ ತಾಲ್ಲೂಕನ್ನು ಉಡುಪಿ ಜಿಲ್ಲೆಗೆ ಸೇರಿಸಬಾರದು.

ಈ ಪತ್ರದಲ್ಲಿನ ಅಂಶಗಳನ್ನು ಶ್ರೀ ಗದ್ದಿಗೌಡರ ಸಮಿತಿಯು ಪರಿಶೀಲಿಸಿ ಶ್ರೀ ಹಾಂಡೇಕರ್ ರವರ ಸಮಿತಿಯ ಶಿಫಾರಸ್ಸು ಸಮರ್ಥನೀಯವಾಗಿದೆ ಎಂದು ಆಗ ವ್ಯಕ್ತಪಡಿಸಿದೆ.

ಮೇಲ್ಕಂಡ ಶಿಫಾರಸ್ಸುಗಳ ಬಗ್ಗೆ ಸರ್ಕಾರವು ಯಾವುದೇ ತೀರ್ಮಾನವನ್ನು ಕೈಕೊಂಡಿರುವುದಿಲ್ಲ. ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ಶಿಫಾರಸ್ಸುಗಳ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವ ಸಮಯದಲ್ಲಿ ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

(೫) ಕೂಡ್ಲಿಗಿ ನೆಲಬೊಮ್ಮನ ಹಳ್ಳಿಯಲ್ಲಿ ೧೮ ಗುಡಿಸಲುಗಳು ಸುಟ್ಟು ಭಸ್ಮವಾಗಿರುವುದಕ್ಕೆ ಪರಿಹಾರ ನೀಡುವ ಬಗ್ಗೆ

SRI K. V. RAVINDRANATHA BABU (Kottur).—18 huts were burnt completely about three months back in Nelabommanahalli in Kudligi Taluka, Bellary District. Letters were written by me to Deputy Commissioner, Zilla Parishat President, Vice President and finally to the Cheif Minister. But so far nothing has been done. Most of these sufferers are now living under trees and in temple. Hence, I urge the Government to provide houses and sanction them compensation

ಶ್ರೀ ವೀರಣ್ಣ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ದಿನಾಂಕ ೨೨-೨-೮೮ರಂದು ಮಧ್ಯಾಹ್ನ ೧ ಗಂಟೆಗೆ ನೆಲಬೊಮ್ಮನಹಳ್ಳಿಯ ಗೊಲ್ಲರ ಹಟ್ಟಿಯಲ್ಲಿ ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡು ೧೮ ಗುಡಿಸಲುಗಳು ಮತ್ತು ಒಂದು ಇಟ್ಟಿಗೆ ಗೂಡು ಸುಟ್ಟು ಹೋಗಿವೆ. ಸುದ್ದಿ ತಿಳಿದ ಪೋಲೀಸರು ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ಹತೋಟಿಗೆ ತಂದಿರುತ್ತಾರೆ. ಈ ಬೆಂಕಿ ಪ್ರಕರಣವಲ್ಲಿ ಅಂದಾಜಿ ರೂಪಾಯಿಗಳಷ್ಟು ಲುಕ್ಸಾನು ಉಂಟಾಗಿದೆ. ಕೂಡ್ಲಿಗಿ ತಹಸೀಲ್ದಾರರು ಆನಾಹುತಕ್ಕೀಡಾದ ಮಂದಿಗೆ ತಲಾ ೩೦೦ ರೂಪಾಯಿಗಳಂತೆ ಪರಿಹಾರ ಧನವನ್ನು ಕೊಟ್ಟಿರುತ್ತಾರೆ. ಉಳಿದವರು ಈ ಪರಿಹಾರಕ್ಕೆ ಅರ್ಹರಲ್ಲ. ಕಾರಣ ಅವರ ವಾರ್ಷಿಕ ಆದಾಯ ಸರ್ಕಾರ ನಿಗಧಿಪಡಿಸಿರುವ ಆದಾಯ

ಕ್ಕಿಂತ ಜಾಸ್ತಿ ಇದೆ. ದಿನಾಂಕ ೧೧-೪-೮೮ರಂದು ಕೊಡ್ಲಿಗಿ ತಹಶೀಲ್ದಾರರಿಗೆ ಮಾನ್ಯ ಮುಖ್ಯ ಮಂತ್ರಿಗಳ ಕಚೇರಿಯಿಂದ ಪತ್ರ ಬಂದಿದ್ದ, ದಿನಾಂಕ ೨೨-೪-೮೮ ರಂದು ಉತ್ತರವನ್ನು ಕಳುಹಿಸಿರುತ್ತಾರೆ.

6. ಶಾಸಕರುಗಳಿಗೆ ದಿನಭತ್ಯ ಹಾಗೂ ಪ್ರಯಾಣದರ ನೀಡುವಲ್ಲಿ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿರುವುದು.

ಶ್ರೀ ಆರ್. ರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ. ಶಾಸಕರುಗಳು ವಿಧಾನ ಪರಿಷತ್ತಿನಲ್ಲಿ ಉಪಸ್ಥಿತರಿದ್ದಾಗ, ದಿನದ ಭತ್ಯ ೭೫ ರೂ. ಹಾಗೂ ಪ್ರಯಾಣದ ದರವನ್ನು ೧ ಕಿ.ಮೀ.ಗೆ ೨.೫೦ ರಂತೆ ನೀಡುವುದು. ಇದೇ ಶಾಸಕರುಗಳು ತಾಲ್ಲೂಕು ಭೂ ಪರಿಹಾರ ಸಮಿತಿಗೆ ಹಾಜರಾದಾಗ ೫೦ ರೂಪಾಯಿ ಮತ್ತು ೧ ಕಿ.ಮೀ.ಗೆ ೦.೭೫ ಪೈಸೆಯಂತೆಯೂ ಮತ್ತು ಇದೇ ರೀತಿಯಲ್ಲಿ ಜಿಲ್ಲಾ ಪರಿಷತ್ ಸಭೆಗೆ ಹಾಜರಾಗಲು ನೀಡುತ್ತಿರುವುದರಿಂದ ಓರ್ವ ವ್ಯಕ್ತಿಗೆ ಇಬ್ಬಗೆಯ ನೀತಿಯನ್ನು ಅನುಸರಿಸಿದಂತಾಗುವುದಲ್ಲದೆ ಇದೇ ರೀತಿ ಹಿಂದಿನ ಕೆ.ಡಿ.ಪಿ. ಸಭೆಗೆ ಹಾಜರಾದಾಗ ಯಾವುದೇ ರೀತಿಯ ಟಿ ಎ ಮತ್ತು ಡಿ.ಎ ನೀಡದಿರುವುದು ಸರ್ಕಾರದ ನೀತಿಗೆ ವಿರುದ್ಧವಾಗಿದೆ. ಆದ ಪ್ರಯುಕ್ತ ಈ ವಿಷಯದಲ್ಲಿ ಏಕ ರೀತಿಯ ನಿರ್ಣಯವಾಗಬೇಕೆಂದು ಕೋರುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಷಯ ಸಧ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

7. ಉಡುಪಿಯಿಂದ ಹುಬ್ಬಳ್ಳಿ ಧಾರವಾಡ ಮತ್ತು ಬೆಳಗಾಂಗೆ ಲಕ್ಸುರಿ ಬಸ್ಸುಗಳನ್ನು ಓಡಿಸುವುದು.

ಶ್ರೀಮತಿ. ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೆ. ಉಡುಪಿ ನಗರ, ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿಯುತ್ತಾ ಇದೆ. ಶಾಲಾ ಕಾಲೇಜುಗಳು ಬಹು ಸಂಖ್ಯೆಯಲ್ಲಿದೆ. ಅದೇ ರೀತಿ ಅಷ್ಟ ಮಠಗಳಿರುವ ಉಡುಪಿ ಧಾರ್ಮಿಕ ನೆಲೆಯಲ್ಲೂ ಪ್ರಸಿದ್ಧವಾಗಿದೆ. ಇಲ್ಲಿಗೆ ಬೇರೆ ಬೇರೆ ಊರುಗಳಿಂದ ಬರುವ, ಹೋಗುವ ಯಾತ್ರಿಕರು ಸದಾ ಇದ್ದೇ ಇರುತ್ತಾರೆ. ಆ ಹಿನ್ನೆಲೆಯಲ್ಲಿ ಉಡುಪಿಯಿಂದ ಹುಬ್ಬಳ್ಳಿ, ಧಾರವಾಡ, ಬೆಳಗಾವಿಗೆ ಲಕ್ಸುರಿ ಬಸ್ಸಿನ ಓಡಾಟ ಪ್ರಾರಂಭಿಸಬೇಕೆಂದು ನಾನಂ ೧೪-೫-೮೯ರಿಂದು ಸಾರಿಗೆ ಸಚಿವರಾದ ತಮಗೆ ಪತ್ರ ಬರೆದಿದ್ದೆ, ಅದಕ್ಕೆ ತಾವು ಉತ್ತರಿಸಿ, ಈ ಕುರಿತು ಸೂಕ್ತ ವ್ಯವಸ್ಥೆ ಮಾಡಲು ಜನರಲ್ ಮ್ಯಾನೇಜರ್‌ರವರಿಗೆ ಆದೇಶ ನೀಡುವುದಾಗಿ ತಿಳಿಸಿರುವುದನ್ನು ವ್ಯಕ್ತಪಡಿಸಿದ್ದೀರಿ. ಆದರೆ ಈವರೆಗೂ ಈ ಕುರಿತು ಯಾವುದೇ ವ್ಯವಸ್ಥೆ ಆಗಿರುವುದಿಲ್ಲ. ಉಡುಪಿಯಲ್ಲಿ ದಿನದಿಂದ ದಿನಕ್ಕೆ ಹುಬ್ಬಳ್ಳಿ, ಧಾರವಾಡ, ಬೆಳಗಾವಿಗೆ ಪ್ರಯಾಣ ಮಾಡುವವರ ಸಂಖ್ಯೆ ಸಾಕಷ್ಟಿದೆ. ಇಲ್ಲಿಂದ ಲಕ್ಸುರಿ ಬಸ್ಸು ಇಲ್ಲದೇ ಇರುವುದು ಈ ಪ್ರಮುಖ ನಗರದ ಕೀರ್ತಿಗೆ ಕಳಂಕವಾಗಿರುತ್ತದೆ. ಆದಕಾರಣ ಧಾರ್ಮಿಕ ಮತ್ತು ಶಿಕ್ಷಣ ಕೀರ್ತಿಯ ಉಡುಪಿಗೆ ಅತಿ ಶೀಘ್ರವೇ ನಾನು ಮೇಲೆ ಸೂಚಿಸಿದಂತೆ, ಲಕ್ಸುರಿ ಬಸ್ಸನ್ನು ಹುಬ್ಬಳ್ಳಿ, ಧಾರವಾಡ, ಬೆಳಗಾವಿಗೆ ಓಡಾಡುವಂತೆ ಆದೇಶ ನೀಡಿ, ಪುಣ್ಯವನ್ನು ಕಟ್ಟಿಕೊಳ್ಳಬೇಕೆಂದು ಆಶಿಸುತ್ತೇನೆ. ಈ ಕುರಿತು ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ (ಮಾನ್ಯ ಸಾರಿಗೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಮಂಗಳೂರು-ಮುಂಬಯಿಗಳ ನಡುವೆ ಉಡುಪಿ, ಕುಂದಾಪುರ, ಭಟ್ಕಳ ಕುಮಟಾ, ಸಿರಸಿ, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂ ಮಾರ್ಗವಾಗಿ ಮೂರು ಸುಪಿಹಾರಿ ಮತ್ತು ಎರಡು ಅರೆ ಸುಖಾಸೀನ ಸಾರಿಗೆಗಳ ಸೌಲಭ್ಯವನ್ನು ಕಲ್ಪಿಸಿದೆ. ಇದಲ್ಲದೆ, ಮಂಗಳೂರಿನಿಂದ ಉಡುಪಿ ಮಾರ್ಗವಾಗಿ ಬೆಳಗಾಂಗೆ ಒಂದು ಪ್ರತ್ಯೇಕ ಅರೆ ಸುಖಾಸೀನ ಸಾರಿಗೆ ಸೌಲಭ್ಯವನ್ನೂ ಸಹ ಕಲ್ಪಿಸಲಾಗಿದೆ. ಈ ಸಾರಿಗೆಗಳಿಗೆ ಉಡುಪಿಯಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದೆಯಲ್ಲದೆ ಮಂಗಳೂರಿನಿಂದ ಪಡೆದ ಟಿಕೆಟ್ಟುಗಳಿಗೆ ಉಡುಪಿಯಲ್ಲಿ ಹತ್ತಿಕೊಳ್ಳುವ ಸೌಲಭ್ಯವನ್ನು ಸಹ ನೀಡಲಾಗಿದೆ. ಧರ್ಮಸ್ಥಳ ಪೂನ ಅರೆ ಸುಖಾಸೀನ ಸಾರಿಗೆಯೂ ಕೂಡ ಉಡುಪಿ ಹುಬ್ಬಳ್ಳಿ ಧಾರವಾಡ ಮತ್ತು ಬೆಳಗಾಂ